ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 18.07.2024

ಮುಖ್ಯ ವಿಚಾರಣೆಃ ಶ್ರೀ. ಕೆ.ಎಸ್.ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತದೆ. ಆದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ . ತೋಯಳ್ಳಿ ಗ್ರಾಮದ ಸರ್ವೆ ನಂ.5/6 ಬಿ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಅದೇ ಗ್ರಾಮದ ಸರ್ವೆ ನಂ. 54 ರ ಪಹಣಿಯನ್ನು ನಿಪಿ 2 ಎಂದು, ಅದೇ ಗ್ರಾಮದ ಸರ್ವೆ ನಂ.5/1 ರ ಪಹಣಿಯನ್ನು ನಿಪಿ 3 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೃಷಿ ಪಾಸ್ ಪುಸ್ತಕವನ್ನು ನಿಪಿ 4 ಎಂದು, ಪಟ್ಟಾ ಪುಸ್ತಕವನ್ನು ನಿಪಿ 5 ಎಂದು, 3 ಜಮಾ ಬಂದಿಗಳನ್ನು ನಿಪಿ 6 ರಿಂದ 8 ಎಂದು, ಎಂ.ಸಿ.ನಂ.11/1996-97 ರ ಖಾತಾ ಬದಲಾವಣ ವಹಿಯನ್ನು ನಿಪಿ 9 ಎಂದು, ಆಕಾರ್ ಬಂದ್ ನ ದೃಡೀಕೃತ ಪ್ರತಿಯನ್ನು ನಿಪಿ 10 ಎಂದು, ಸರ್ವೆ ಅಧಿಕಾರಿಗಳು ಮಾಡಿದ ಮಹಜರ್ ಅನ್ನು ನಿಪಿ 11 ಎಂದು, ಸರ್ವೆ ನಕಾಶೆಯನ್ನು ನಿಪಿ 12 ಎಂದು, ವಕೀಲರ ನೋಟಿಸನ್ನು ನಿಪಿ 13 ಎಂದು, ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ 14 ಎಂದು, ಅಂಚೆ ಸ್ವೀಕೃತಿ ಹಿಂಬರಹಗಳನ್ನು ನಿಪಿ 15 ರಿಂದ 19 ಎಂದು, ಉತ್ತರದ ನೋಟಿಸನ್ನು ನಿಪಿ 20 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಸಹಿ/-

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.